# ಕುವೆಂಪು ಕವಿತೆಗಳಲ್ಲಿ ಪುರಾಣ ಮತ್ತು ಸ್ತ್ರೀ

**ಆಶಾ ಎನ್.ಆರ್.[*] & ಟಿ.ಎನ್. ವಾಸುದೇವಮೂರ್ತಿ[**]**

**DOI: https://doi.org/10.5281/zenodo.22252401**

**ABSTRACT**

ಇಪ್ಪತ್ತನೇ ಶತಮಾನದ ಕವಿ ಕುವೆಂಪು ತಮ್ಮ ವೈಚಾರಿಕ ಚಿಂತನೆಗಳು, ಸಾಮಾಜಿಕ ಕಳಕಳಿಗೆ ಹೆಸರಾದವರು. ಪಾಶ್ಚಾತ್ಯ ಸಾಹಿತ್ಯ, ತತ್ವಶಾಸ್ತ್ರವನ್ನು ಓದಿಕೊಂಡು ಆಧುನಿಕತೆಗೆ ತೆರೆದುಕೊಂಡಿದ್ದವರು. ಕುವೆಂಪು ತಮ್ಮ ಕಾಲದ ಪಲ್ಲಟಗಳಿಗೆ ಸಾಹಿತ್ಯಿಕ ಸ್ಪಂದನ ನೀಡಿ ಭೂತವನ್ನು ವರ್ತಮಾನದ ಸಂಗತಿಗಳಿಗನುಸಾರ ಸೂಕ್ಷ್ಮ ದೃಷ್ಟಿಯಿಂದ ಸಂವೇದಿಸಿದ ವಿಶ್ವಪ್ರಜ್ಞೆಯ ಲೇಖಕರು. ಕುವೆಂಪು ಚಿಂತನೆಯಲ್ಲಿ ಸ್ತ್ರೀಯರ ಸ್ಥಾನಮಾನದ ಅವಲೋಕನ, ಅವರ ಕವಿತೆಗಳಲ್ಲಿ ಸ್ತ್ರೀ ಸಂವೇದನೆಯು ಮೂಡಿಬಂದಿರುವ ಬಗೆಯನ್ನು ಅರಿಯುವುದು ಈ ಲೇಖನದ ಉದ್ದೇಶ. ಇಲ್ಲಿ ಪುರಾಣ ಎಂದರೆ ಹಳೆಯ ವಸ್ತು, ಮೌಲ್ಯ, ವಿಚಾರ, ಪಾತ್ರಗಳು, ಪ್ರಸಂಗಗಳೆಂದು ಪರಿಗಣಿಸಲಾಗಿದೆ. ಹಳೆಯ ಮೌಲ್ಯಗಳ ಸ್ವೀಕರಣ, ಹಳೆಯ ಮೌಲ್ಯಗಳ ನಿರಾಕರಣ, ಪುರಾಣ ಸ್ತ್ರೀ ಪ್ರತಿಮೆಗಳ ಆದರ್ಶದ ಚಿತ್ರಣ ಎಂಬ ನೆಲೆಗಳಲ್ಲಿ ಸ್ತ್ರೀಯರ ಕುರಿತಾದ ಕುವೆಂಪು ದೃಷ್ಟಿಕೋನವನ್ನು ಮತ್ತು ಅವರ ಕವಿತೆಗಳಲ್ಲಿ ಪುರಾಣ ಪ್ರಜ್ಞೆಗೆ ಸ್ತ್ರೀ ರೂಪಕಗಳು ಹೇಗೆ ಎದುರಾಗುತ್ತವೆ ಎಂಬುದರ ಪರಿಶೀಲನೆ ಈ ಲೇಖನದಲ್ಲಿದೆ.

**KEYWORDS:** ಕುವೆಂಪು, ಪುರಾಣ ಪ್ರಜ್ಞೆ, ಸ್ತ್ರೀ ಸಂವೇದನೆ, ಸಾಂಪ್ರದಾಯಿಕ ಮೌಲ್ಯ, ಆಧುನಿಕ ಮಹಿಳೆ, ಮೌಢ್ಯಗಳು, ದೈವಿಕತೆ, ಪುರಾಣ ಸ್ತ್ರೀ.

* **ಆಶಾ ಎನ್.ಆರ್.,** ಸಂಶೋಧನಾರ್ಥಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿ.ಜಿ. ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ.

** **ಡಾ. ಟಿ.ಎನ್. ವಾಸುದೇವಮೂರ್ತಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿ.ಜಿ. ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಪೂಜನೀಯ ಸ್ಥಾನವಿದೆ. ಆದರೆ ಎಲ್ಲಾ ಕಾಲಘಟ್ಟಗಳಲ್ಲಿಯೂ ನಾರಿಯರು ಸುಸ್ಥಿತಿಯಲ್ಲಿರಲಿಲ್ಲ. ಹೆಣ್ಣನ್ನು ಕುರಿತ ಧೋರಣೆಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದವು. ಹೆಣ್ಣು ಕ್ರಮೇಣ ದ್ವಿತೀಯ ದರ್ಜೆಯ ಪ್ರಜೆಯಾಗಿ, ಅಧೀನ ನೆಲೆಯವಳಾಗಿ ಅಲಕ್ಷಿತ ವರ್ಗಕ್ಕೆ ಸೇರಿದಳು. ಈ ಸ್ಥಿತಿಯ ಸುಧಾರಣೆಗಾಗಿ ಹಲವು ಚಿಂತನಕ್ರಮಗಳು ಲಕ್ಷ್ಯವಹಿಸಿವೆ. ಸಾಮಾಜಿಕ, ಸಾಹಿತ್ಯಿಕ ನೆಲೆಗಳಲ್ಲಿ ಪ್ರತಿರೋಧಗಳುಂಟಾಗಿವೆ.

**ಪುರಾಣ ಮತ್ತು ಸ್ತ್ರೀ:**

"ಕುವೆಂಪು ನಿರ್ಮಿಸಿದ್ದು, ದೊಡ್ಡ ಪ್ರಮಾಣದ ಸಾಹಿತ್ಯ. ಆದ್ದರಿಂದ ಅವರು ಸೃಷ್ಟಿಸಿದ ಸ್ತ್ರೀ ಲೋಕ ಕೂಡ ದೊಡ್ಡದೇ. ಕುವೆಂಪು ಅವರಿಗೆ ಸಹಜವಾಗಿಯೇ ಸ್ತ್ರೀ ಲೋಕದ ಬಗ್ಗೆ ಅನಂತ ಗೌರವ, ಉದಾತ್ತ ನಡೆ."[1] ಅವರ ಸಾಹಿತ್ಯದಲ್ಲೆಲ್ಲಾ ವ್ಯಾಪಿಸಿರುವ ಮಹಿಳೆ ಅವರ ಬೃಹತ್ ಕಾದಂಬರಿಗಳ ಶೀರ್ಷಿಕೆಯನ್ನು ಆವರಿಸಿದ್ದಾಳೆ. ಪಾತ್ರಪ್ರಧಾನತೆಯಲ್ಲಿಯೂ ಪುರುಷನಿಗೆ ಸಮಾನವಾಗಿ ಅವತರಿಸಿದ್ದಾಳೆ. ಕುವೆಂಪು ಹೆಣ್ಣಿನ ತಾಯ್ತನವನ್ನು ತಮ್ಮ ಸಾಹಿತ್ಯದಲ್ಲಿ ವ್ಯಾಪಕವಾಗಿ ಪರಿಭಾವಿಸುತ್ತಾರೆ. ಭಾರತವು ಜನನಿಯಾಗಿ, ಕನ್ನಡಾಂಬೆಯು ತನುಜಾತೆಯಾಗಿದ್ದು, ಈ ಭಾವದಿಂದಲೇ.

**ಹಳೆಯ ಮೌಲ್ಯಗಳ ಸ್ವೀಕರಣ:**

ಸ್ತ್ರೀ ಇಂದು ತನ್ನ ಪ್ರತಿಭೆಯಿಂದ ಹಲವಾರು ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾಳೆ. ಆದರೆ ಮೂಲತಃ ಅವಳೊಬ್ಬಳು ಗೃಹಿಣಿ. ಪುರಾತನವಾದ ಈ ಮೌಲ್ಯವನ್ನು ಕುವೆಂಪು ಎತ್ತಿಹಿಡಿಯುತ್ತಾರೆ. ಸರ್ವೋದಯ, ಸಮನ್ವಯ ತತ್ವಗಳನ್ನು ನಂಬಿದ್ದ ಅವರು ಜಗತ್ತಿನೆಲ್ಲಾ ಸ್ತ್ರೀಯರನ್ನು ಸಮಾನ ಮತ್ತು ಪೂಜನೀಯ ಭಾವದಿಂದ ಕಾಣುತ್ತಾರೆ. ಗೃಹಿಣಿಯನ್ನು ಗೃಹಶ್ರೀ, ಮನೆಮನೆಯ ತಪಸ್ವಿನಿ ಎಂದು ಹೊಸ ಹೆಸರಿಟ್ಟು ಕರೆದು ನಮೋ ನಿನಗೆ ನಿತ್ಯಧನ್ಯೆ ಎಂದು ನಮಸ್ಕರಿಸಿದರು. ಕಾಡಿನಲ್ಲಿ ಧ್ಯಾನಮಗ್ನರಾಗಿ ಕುಳಿತು ಜಪ ಮಾಡುವುದಷ್ಟೇ ತಪಸ್ಸಲ್ಲ. ಸಂಸಾರ ಲೋಕದಲ್ಲಿ ಅಹಂಕಾರವನ್ನು ತೊರೆದು, ನಿಸ್ವಾರ್ಥ ಪ್ರೀತಿಯಿಂದ ಇಡೀ ಕುಟುಂಬವನ್ನು ಜವಾಬ್ದಾರಿಯಿಂದ ಮುನ್ನಡೆಸುವ ಹೆಣ್ಣಿನ ದೈನಂದಿನ ಬದುಕೂ ಸಹ ಒಂದು ಮಹಾ ತಪಸ್ಸೇ ಆಗಿದೆ. ಆದರೆ ಕುಟುಂಬದಲ್ಲಿ ಹೆಣ್ಣಿನ ಶ್ರಮ ನಗಣ್ಯವಾಗಿರುತ್ತದೆ.

ಕವಿ ಹೆಣ್ಣಿನ ವಿಷಯದಲ್ಲಿ ಪರಂಪರೆಯನ್ನೇ ಒಪ್ಪಿ ನಡೆಯುತ್ತಾರೆ. ಹೆಣ್ಣನ್ನು ಮನೆಯ ಗೃಹಲಕ್ಷ್ಮಿಯಂತೆ ನೋಡಲು ಬಯಸುವ ಕವಿಗೆ ಹೊಸ್ತಿಲಿನಾಚೆಗಿನ ಪ್ರಪಂಚದಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯ ಬಗ್ಗೆ ಆಸಕ್ತಿಯಿಲ್ಲ. ಸರೋಜಿನಿ ನಾಯ್ಡು, ಝಾನ್ಸಿರಾಣಿ ಲಕ್ಷ್ಮಿಬಾಯಿ, ವಿಜಯಲಕ್ಷ್ಮಿ ಪಂಡಿತ್ ಮುಂತಾದ ಸಾಧಕರ ಸಾಧನೆಯು ಗೃಹಸ್ತ್ರೀಯರ ಮುಂದೆ ಅಲ್ಪ ಎಂದು ಹೇಳುತ್ತಾ ಅವಳನ್ನು ಮನೆಗೆ ಸೀಮಿತಗೊಳಿಸುತ್ತಾ, ಗಂಡಸರಂತೆ ಕೀರ್ತಿಯ ಬೆನ್ನು ಬೀಳದಿರಲೆಂದು ಆಶಿಸುತ್ತಾರೆ. ಹೆಣ್ಣು ಆಧುನಿಕತೆಗೆ ತೆರೆದುಕೊಳ್ಳುವುದನ್ನು ವಿರೋಧಿಸುತ್ತಾರೆ ಎನ್ನುವುದಕ್ಕಿಂತ, ಆಧುನಿಕತೆಯನ್ನು

ಪ್ರೋತ್ಸಾಹಿಸುವ ಸುಳಿಹುಗಳೇನೂ ಕಂಡುಬರುವುದಿಲ್ಲ. ಕುವೆಂಪು ಹೆಣ್ಣಿಂದ ಬಯಸುವುದು ಅವಳ ಸಾಂಪ್ರದಾಯಿಕ ಗುಣಗಳನ್ನೇ. ಆದರೆ ಸ್ತ್ರೀವಾದ ಹೆಣ್ಣಿನ ಅಸ್ತಿತ್ವದ ಈ ಬಗೆಯ ನೆಲೆಯನ್ನು ತಿರಸ್ಕರಿಸುತ್ತದೆ. ‘‘ಶತಮಾನಗಳ ಕಾಲದ ಪಾಠದಲ್ಲಿ ಸಾಮಾಜಿಕ ಸಂದರ್ಭದಲ್ಲಿ ನನ್ನ ಸಾಮರ್ಥ್ಯಗಳಾಗಿ ಉಳಿದಿರುವುದು ಹೆಣ್ಣುತನದ ಹಲವು ಬಗೆಯ ಗುಣಗಳು. ಅದು ಸ್ತ್ರೀ ವಾದದ ಸೂಕ್ತ ಮಾದರಿಯಲ್ಲ. ಸ್ತ್ರೀವಾದವು ಆತುಕೊಳ್ಳಬೇಕಾಗಿರುವುದು ಯಜಮಾನಿಕೆಯು ತೋರಿಸಿದ ಮಾದರಿಯ ಸಾಮರ್ಥ್ಯವನ್ನಲ್ಲ. ರಿಕ್ಲೈಮ್ ಮಾಡಬೇಕಾಗಿರುವುದು ನೀನೇ ಕಂಡುಕೊಳ್ಳಬೇಕಾದ ಸಾಮರ್ಥ್ಯವನ್ನು.’’[2]

ನೆನಪಿನ ದೋಣಿಯಲ್ಲಿ ಆತ್ಮಕಥೆಯಲ್ಲಿ ಹುಬ್ಬಳ್ಳಿಯ ಕವಿಸಮ್ಮೇಳನದಲ್ಲಿ ಸಭೆಗೆ ಇವರನ್ನು ಪರಿಚಯಿಸಿಕೊಟ್ಟ ಕೊಡಗಿನ ಮಡಿಕೇರಿಯ ಚಿ.......ಪ್ಪನವರ ಮಗಳು ಪ.....ವತಿಯವರ ಬಗ್ಗೆ ಹೇಳುತ್ತಾರೆ. ಅವರಿಗೆ ಪುಟ್ಟಪ್ಪನವರನ್ನು ವರಿಸುವ ಆಸೆ ಇತ್ತೆಂದು ಹಲವು ಘಟನೆಗಳ ನಿದರ್ಶನದೊಂದಿಗೆ ಬರೆದುಕೊಳ್ಳುತ್ತಾರೆ. ಬಹುಶಃ ಸ್ತ್ರೀ ಗೃಹಲಕ್ಷ್ಮಿಯಾಗಿರಬೇಕೆಂಬ ಮನೋಭಾವವು ಹೊರಗಿನ ಪ್ರಪಂಚದಲ್ಲಿ ಕ್ರಿಯಾಶೀಲರಾಗಿದ್ದ ಪ....ವತಿಯವರನ್ನು ನಿರಾಕರಿಸುವಂತೆ ಮಾಡಿರಬಹುದು.[3]

**ಹಿಡಿಯದಿರಲಿ ನಿನಗಾದರು**
**ಹೊಸಲಾಚೆಗೆ ನೀನೋತರೆ**
**ಹೊಸಲೀಚೆಗೆ ಬೆಳಕಿಲ್ಲ**
**ಹೆಸರಾಸೆಗೆ ನೀ ಸೋತರೆ**
**ಉಸಿರಾಸೆಯೆ ನಮಗಿಲ್ಲ![4]**

ಕವಿಯ ಉದ್ದೇಶ ಗೃಹಿಣಿಯನ್ನು ಮನೆಯಲ್ಲಿಯೇ ಬಂಧಿಸುವುದಲ್ಲ. ‘‘ಹೆಣ್ಣು ಮನೆಯೆಂಬ ಸೆರೆಮನೆಯಲ್ಲಿ ಅವಕುಂಠನವತಿಯಾಗಿ ಗಂಡಸಿನ ತೊತ್ತಾಗಿ ಮೂಲೆಗುಂಪಾಗಿರಬೇಕೆಂಬುದಲ್ಲ ಕವಿಯ ಅಭಿಪ್ರಾಯ.’’[5] ಭಾರತೀಯ ಸಂಸ್ಕೃತಿಯಲ್ಲಿ ಗೃಹಿಣಿಯೇ ಕುಟುಂಬದ ಆಂತರಿಕ ಶಕ್ತಿ. ಗೃಹವೇ ಅವಳ ತಪೋಭೂಮಿ ಎಂಬ ಸಾಂಸ್ಕೃತಿಕ ಮೌಲ್ಯವನ್ನು ಎತ್ತಿಹಿಡಿಯುವ ಉದ್ದೇಶವಾಗಿದೆ. ಹಾಗಾಗಿ ಮನೆಯಾಚೆ ಹೋಗದಿರಿ ಎಂಬ ಸವಿನಯ ನಿರ್ಬಂಧ ಹೇರುತ್ತಾರೆ.

‘‘ಹೆಣ್ಣಿಗೆ ಹೆಣ್ಣೇ ಶತ್ರು’’ ಎಂಬುದು ಪ್ರಾಚೀನ ಕಾಲದಿಂದಲೂ ಕೇಳಿಬಂದಿರುವ ಸಾಂಪ್ರದಾಯಿಕ ನಾಣ್ಣುಡಿ. ‘ನಾಗಿ’ ಕಥನಕವನವು ಈ ಮಾತಿಗೆ ಅನ್ವಯಾರ್ಥವಾಗಿದೆ. ಮಲತಾಯಿ ಮಾದಿಯ ಕ್ರೌರ್ಯದ ಕಾರಣ ಕಳೆದುಹೋದ ಹಸು ತುಂಗೆಯನ್ನು ಕಗ್ಗತ್ತಲ ಕಾಡಿನಲ್ಲಿ ಹುಡುಕುತ್ತಾ ಹೋಗುವ ತಾಯಿಯಿಲ್ಲದ ಎಳೆಹುಡುಗಿ ನಾಗಿ ದುರದೃಷ್ಟದಿಂದ ಅಪ್ಪನ ಕೋವಿಗೆ ಬಲಿಯಾಗುತ್ತಾಳೆ. ತಂದೆ ಮಾದನೂ ಮಗಳೊಂದಿಗೆ ಸಾವನ್ನಪ್ಪುತ್ತಾನೆ. ಈ ಕಥನಕವನದಲ್ಲಿ ಕರುಣಾರಸಭಾವವೇ ಪ್ರಧಾನವಾಗಿದೆ. ಕವನವು ಹಳೆಯ ನಾಣ್ಣುಡಿಯನ್ನೇ ಬಿಂಬಿಸಿದರೂ ಸ್ತ್ರೀ ಮನದ ಸೂಕ್ಷ್ಮಗಳ ಅರಿಯುವ ನೆಲೆಯಿದೆ.

**ಸವತಿತಾಯಿ ಸಿಡುಕಿ ಮತ್ತೂ ರೇಗಿ ರೇಗಿ ಬೈದು ಬೈದೂ**
**"ಹೋಗು ಮುಂಡೆ, ಮನೆಯ ಒಳಗೆ ಕಾಲು ಇಡಬೇಡೆಂ" ದಳು;**
**ಪುಟ್ಟ ಹುಡುಗಿ ನಾಗಿ ಕಂಬಳಿ ಕೊಪ್ಪೆ ಹಾಕಿಕೊಂಡು, ಅಳುತ,**
**ತುಂಗೆ ದನವ ಹುಡುಕಲೆಂದು ಕಪ್ಪಿನಲ್ಲಿ ಹೊರಟಳು.**[6]

ಇದು ಕವಿಗೆ ಹೆಣ್ಮನದ ಅಸೂಯೆಯಾಗಿ ಕಾಣುವುದಿಲ್ಲ. ಬದಲಿಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಕಾಡುತ್ತಿದ್ದ ಅಭದ್ರತೆಯ ಭಾವ, ಪುರುಷಾವಲಂಬನೆಯ ಸ್ಥಿತಿಯಿಂದ ಹೆಣ್ಣುಮಕ್ಕಳಲ್ಲಿ ಪರಸ್ಪರ ಸ್ಪರ್ಧೆ ಏರ್ಪಟ್ಟು ವೈರತ್ವ ಉಂಟಾಗುತ್ತಿತ್ತೆಂಬ ಸೂಕ್ಷ್ಮತೆಯನ್ನು ಬಿಂಬಿಸುತ್ತಾರೆ. ಇದೇ ಎಳೆಯನ್ನು ಕಾನೂರು ಹೆಗ್ಗಡತಿ ಕಾದಂಬರಿಯಲ್ಲೂ ಕಾಣುತ್ತೇವೆ. ಕಡೆಗೋಲು ಕಂಬದ ಸಾಕ್ಷಿಯಲ್ಲಿ, ಕಡೆಗೋಲು ಮಜ್ಜಿಗೆ ಕಡೆಯುವ ಸಾಧನ ಮಾತ್ರವಾಗಿರದೆ, ತಲತಲಾಂತರದ ಹೆಣ್ಣುಮಕ್ಕಳ ಬದುಕು – ಬವಣೆಗಳಿಗೆ ಸಾಕ್ಷಿಯಾಗಿದೆ.

ಸಾಂಪ್ರದಾಯಿಕ ಪರಿಕಲ್ಪನೆಯಾದ ಸ್ವರ್ಗ, ನರಕಗಳ ಇರುವಿಕೆಯನ್ನು ಒಪ್ಪದ ಕವಿಗೆ ಕಾಣದ ಲೋಕದ ಸುಖಕ್ಕಾಗಿ ಹಪಹಪಿಸುವ ಬದಲು ಮಾನವರಾಗಿ ಬದುಕಿ, ಇಹದಲ್ಲಿಯೇ ಸ್ವರ್ಗ ಕಾಣುವ ಚಿಂತನೆಯಿದೆ. ಆದರೆ ವಿರೋಧಾಭಾಸವೆಂಬಂತೆ ಕುಮುದಿನಿ ಕಥನಕವನದಲ್ಲಿ ಸಾವಿನ ನಂತರದ ಸ್ವರ್ಗ, ಅಲ್ಲಿನ ಸೊಗದ ಸ್ಥಿತಿ ಇಹಕ್ಕಿಂತಲೂ ಉತ್ತಮವೆಂಬಂತೆ ಚಿತ್ರಿತವಾಗಿದೆ.

ಕಥೆಯ ನಾಯಕಿ ಕುಮುದಿನಿ ಎರಡು ವರ್ಷಗಳ ಹಿಂದೆ ಯುದ್ಧಕ್ಕೆ ಹೋದ ಯೋಧ ಪತಿಯು ಮರಳಿ ಬಾರದ ದುಃಖ, ದುಗುಡ, ವಿರಹ ವೇದನೆಯಲ್ಲಿ ಕಾಲ ನೂಕಿದಳು. ರಮಣನನ್ನು ಕಳುಹೆಂದು ಜಗದೀಶನನ್ನು ಬೇಡಿದಳು. ಪ್ರಕೃತಿಯನ್ನು ಕಾಡಿದಳು. ಅವಳ ಪರಮ ಭಕ್ತಿಗೆ ಒಲಿದ ಹರಿ ಕುಮುದಿನಿಯ ರಮಣನನ್ನು ಸತಿಯ ಸಂತೈಸುವಿಕೆಗಾಗಿ ಮೂರು ಗಳಿಗೆ ಮಾತ್ರ ಹೋಗಿ ಬರಲು, ಸ್ವರ್ಗಕ್ಕೆ ಸಂದೇಶ ಕಳುಹಿಸಿದನು. ದೂತನೊಡನೆ ಕೂಡಿ, ಸ್ವರ್ಗದಿಂದ ಇಳೆಗೆ ಬಂದ ರಮಣನನ್ನು ಅಪ್ಪಲು ಮುಂದಾದ ಕುಮುದಿನಿ ನಿರಾಶಳಾದಳು.

**"ಬರಿದೆ ಹಂಬಲವೇಕೆ, ಕುಮುದಿನಿ?**
**ಹರಿಯು ಕೃಪೆಯಿಂದಿಲ್ಲಿಗೆನ್ನನು**
**ಕಳುಹಿದುದು ಕಾಮಿನಿಯ ಕಾಮವ**
**ಪರಿಹರಿಸಲೆಂದಲ್ಲ; ಭಕುತಿಗೆ**
**ಮೆಚ್ಚಿಯಟ್ಟಿದನು!**[7]

ದೇವ ನಿಯಮವನ್ನು ಮೀರಬಾರದೆಂದು ಪತ್ನಿಗೆ ಬುದ್ಧಿ ಮಾತುಗಳನ್ನು ಹೇಳಿದ ರಮಣ ದೂತನೊಂದಿಗೆ ಸ್ವರ್ಗದ ದಾರಿ ಹಿಡಿಯುತ್ತಾನೆ. ಇದರಿಂದ ಅತಿಯಾಗಿ ನೊಂದ ಕುಮುದಿನಿಯ ಜೀವ ಪತಿಯನ್ನು ಹಿಂಬಾಲಿಸುತ್ತದೆ.

ಇದು ವರ್ಡ್ಸ್ ವರ್ತ್ ಕವಿಯ 'Laodamia' ಎಂಬ ಕವಿತೆಯ ಭಾವವನ್ನು ಗ್ರಹಿಸಿ ರಚಿತವಾದ ಕಥನ ಕವನ. ಆದರೆ ಇದು ಭಾಷಾಂತರವಲ್ಲ. ವರ್ಡ್ಸ್ ವರ್ತ್‌ನ

ಪ್ರಭಾವದಿಂದಾಗಿ ಮೂಲಕಥೆಯ ಚೌಕಟ್ಟು ಹಾಗೆಯೇ ಉಳಿಸಿಕೊಂಡಿರುವ ಸಾಧ್ಯತೆಯಿದೆ. ಅಲ್ಲದೆ ಕವಿಯ ಆರಂಭದ ಕಾಲಘಟ್ಟದಲ್ಲಿ (1936) ಬರೆದ ಕವಿತೆಯಾಗಿರುವ ಕಾರಣದಿಂದಲೂ ಸ್ವರ್ಗ–ನರಕ ಪರಿಕಲ್ಪನೆಗಳ ಸ್ವೀಕರಣದಲ್ಲಿ ವೈರುಧ್ಯವಾಗಿರಬಹುದು. ಕವಿತೆಯಲ್ಲಿ ಹಿಂದಿನ ಪಾರಂಪರಿಕ ಮನಸ್ಥಿತಿಯನ್ನು ಕವಿ ಮುಂದುವರಿಸಿದ್ದಾರೆ.

ಕವಿ, ಕುಮುದಿನಿಯನ್ನು ರಮಣನಿಂದ ಕಾಮವನ್ನೇ ಹಂಬಲಿಸುವ ಮನೋ ದೌರ್ಬಲ್ಯದ ದುರ್ಬಲ ಮನಸ್ಸಿನವಳಾಗಿ ಚಿತ್ರಿಸಿದ್ದಾರೆ. "ಉಕ್ಕುತಿಹ ಕಾಮವನ್ನು ಭಕ್ತಿಯ ಕಣ್ಣಿಯಲ್ಲಿ ಬಿಗಿ, ಕಟ್ಟು; ಮಂಗಳವಾಗುವುದು ನಿನಗೆ" ಎಂದು ಅವಳ ನಡೆಯನ್ನು ತಿದ್ದುವ ಪತಿ ಇಲ್ಲಿ ಅಚಲನಾಗಿದ್ದಾನೆ. ಸೀತೆ, ಸಾವಿತ್ರಿ, ಊರ್ಮಿಳೆಯಂತಹ ಘನತೆವೆತ್ತ ಸ್ತ್ರೀಯರ ಮುಂದೆ ಐಹಿಕ ಸುಖಗಳಿಗೆ ಶರಣಾಗುವ ಕುಮುದಿನಿ ದುರ್ಬಲಳೆನಿಸುತ್ತಾಳೆ. ಇಂದ್ರಿಯಗಳನ್ನು ಗೆದ್ದಾಗ ಮಾತ್ರ ಆಧ್ಯಾತ್ಮಿಕ ಸಾಧನೆ ಸಾಧ್ಯವೆಂಬ ರಾಮಕೃಷ್ಣ ಪರಮಹಂಸರ ತಾತ್ವಿಕತೆಯ ಪ್ರಭಾವದಿಂದ ಕವಿ, ಅಚಲ, ನಿರ್ಲಿಪ್ತ ಮನಸ್ಸಿನ ಪತಿಯ ಪಾತ್ರವನ್ನು ಸೃಷ್ಟಿಸಿರಬಹುದು. ಆದರೆ ಮಾನವೀಯ ನೆಲೆಯಲ್ಲಿ ಅವಲೋಕಿಸಿದರೆ ಶೋಕತಪ್ತಳಾದ ಪತ್ನಿಗೆ ಕನಿಷ್ಟ ಸಾಂತ್ವನ ಹೇಳದ ಆಧ್ಯಾತ್ಮಿಕ ಸಾಧಕನಂತೆ ತೋರುವ ಪತಿ ಲಘುವಾಗಿ ಕಾಣುತ್ತಾನೆ. ಸಾವಿನಲ್ಲಿ ಪತಿಯನ್ನು ಹಿಂಬಾಲಿಸುವ ಕುಮುದಿನಿ ಅಗಾಧವಾದ ಪ್ರೀತಿ, ಪತಿಭಕ್ತಿಯ ಸಂಕೇತವೆನಿಸಿದರೂ, ಹೆಣ್ಣಿಗೆ ಪತಿಯ ಹೊರತು ಬೇರೆ ಅಸ್ತಿತ್ವವಿಲ್ಲ, ಬದುಕಿಲ್ಲವೆಂದು ಭಾವಿಸುವ ಅಧೀನ ನೆಲೆಯ ಚಿತ್ರಣವಿದೆ.

**ದೈವಿಕ ನೆಲೆ:**

ಸೃಷ್ಟಿಯ ಮೂಲವೇ ಆದಿಶಕ್ತಿ. ಬ್ರಹ್ಮಾಂಡದ ಶಕ್ತಿಯನ್ನು ಸ್ತ್ರೀರೂಪದಲ್ಲಿ ಆರಾಧಿಸುವ ಪದ್ಧತಿ ಪ್ರಾಚೀನವಾದುದು. "ಆಪತ್ತಿಗೆ ಗುರಿಯಾಗಿರುವಾಗ ನೀವು ನನ್ನನ್ನು ಸ್ಮರಿಸಿರಿ. ಆ ಕ್ಷಣದಲ್ಲಿ ನಾನು ನಿಮ್ಮ ಮಹಾಸಂಕಟಗಳನ್ನು ನಾಶಮಾಡಿ ನಿಮ್ಮನ್ನು ತಮ್ಮ ತಮ್ಮ ಪದದಲ್ಲಿ ಸುಖವಾಗಿರಿಸುವೆನು."[8] ಎಂದು ದೇವೀಶಕ್ತಿಯು ದೇವತೆಗಳಿಗೆ ವರ ನೀಡಿರುವಳು. ಭಾರತೀಯ ಪುರಾಣಗಳಲ್ಲಿ "ಎಲ್ಲ ಸೌಮ್ಯವಸ್ತುಗಳನ್ನು ಮೀರಿಸಿದ ಸೌಮ್ಯಸ್ವರೂಪ, ರೌದ್ರ–ವಸ್ತುಗಳನ್ನು ಮೀರಿಸಿದ ರೌದ್ರಸ್ವರೂಪಗಳುಳ್ಳವಳಾದ ದೇವಿಯನ್ನು ಅತಿಶಯವಾಗಿ ನಮಸ್ಕರಿಸುವೆವು. ಜಗತ್ತಿನ ಪ್ರತಿಷ್ಠಾಸ್ವರೂಪಳೂ, ಸೃಷ್ಟಿ–ಸ್ಥಿತಿ–ಸಂಹಾರಗಳಿಗೆ ಅನುಕೂಲವಾದ ಯತ್ನಸ್ವರೂಪಳೂ ಆದ ಮಹಾದೇವಿಯನ್ನು ಪುನಃ ಪುನಃ ನಮಸ್ಕರಿಸುತ್ತೇವೆ."[9] ಎಂಬುದಾಗಿ ದೇವಿಯ ಶಕ್ತಿಯನ್ನು ಕೊಂಡಾಡಿದ್ದಾರೆ. ದೇವತೆಗಳ ಕಲ್ಪನೆ ಇಂದು ನೆನ್ನೆಯದಲ್ಲ ಪುರಾತನವಾದದ್ದು ಮತ್ತು ಪರಂಪರಾಗತವಾದದ್ದು. ಈ ಪರಿಕಲ್ಪನೆಯನ್ನು ಒಪ್ಪುವ ಕುವೆಂಪು ತಮ್ಮ ಕವಿತೆಗಳಲ್ಲಿ ಶಕ್ತಿ ದೇವತೆಯ ಪ್ರತಿಮೆಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ. ಕಾಳಿ, ಭೈರವನಾರಿ ರೂಪಗಳನ್ನು ಭೈರವ, ಕಲ್ಕಿಯಂತಹ ಅವತಾರ ಪುರುಷರಿಗೆ ಸಮಾನ ಶಕ್ತಿ ರೂಪವಾಗಿಯೇ ಚಿತ್ರಿಸುವ ಮೂಲಕ ಸ್ತ್ರೀ–ಪುರುಷ

ಸಮಾನತೆಯ ಮೌಲ್ಯವನ್ನು ಪ್ರತಿಪಾದಿಸುತ್ತಾರೆ. ಆದರೆ ಹಿಂದಿನದಕ್ಕಿಂತ ಪ್ರಸ್ತುತತೆಗೆ ಹೆಚ್ಚು ಒತ್ತು ಕೊಡುವ ಕವಿ ದೇವತೆಗಳನ್ನು ಧಾರ್ಮಿಕ ಪೂಜಾ ವಸ್ತುಗಳಾಗಿ ಚಿತ್ರಿಸಿಲ್ಲ. ದೇವತೆಗಳ ಪೌರಾಣಿಕ ಪವಾಡಗಳ ಬಗೆಗೆ ಬಣ್ಣನೆಯಾಗಲಿ, ಪುರಾಣದ ಕಥೆಗಳ ವರ್ಣನೆ, ವೈಭವವಾಗಲಿ ಅಲ್ಲಿಲ್ಲ. ಸಾಮಾಜಿಕ ಅಪಸವ್ಯಗಳಿಗೆ ಪರಿಹಾರವನ್ನು ಸ್ತ್ರೀ ಶಕ್ತಿಯಲ್ಲಿ ಕಾಣುವ ಕವಿ ಹೆಣ್ಣಿನ ಘನತೆಯನ್ನು ಹೆಚ್ಚಿಸಿದ್ದಾರೆ. ಕವಿಯ ಸಾಂಪ್ರದಾಯಿಕ ಮನಸ್ಸು, ಸಮಕಾಲೀನ ಸಾಮಾಜಿಕ ಕಳಕಳಿ ಇಲ್ಲಿ ವ್ಯಕ್ತವಾಗುತ್ತದೆ.

**ಕುಣಿಯುವಳಾರೀ ಭೈರವನಾರಿ**
**ರಣರಂಗದಲಿ ರೌದ್ರವ ತೋರಿ?**
**ನರ್ತನದಿಂ ನವಶಕ್ತಿಯು ಹೊಮ್ಮಿ**
**ಸೃಷ್ಟಿ ಸ್ಥಿತಿ ಲಯ ಚಕ್ರಂ ಚಿಮ್ಮಿ**
**ಜಡ ಚೇತನ ರೂಪುಗಳಾಗೊಡೆದು**
**ತೋರ್ಪುದು ಸುಖದುಃಖಗಳನು ಹಡೆದು![10]**

**ಹಳೆಯ ಮೌಲ್ಯಗಳ ನಿರಾಕರಣೆ:**

ಹಳೆಯದೆಲ್ಲವೂ ಹೊನ್ನೇ ಆದರೂ ಹೊಸ ಕಾಲ, ಹೊಸ ಅಭಿರುಚಿಗಳಿಗೆ ತಕ್ಕಂತೆ ಅವುಗಳ ಸ್ವರೂಪ ಬದಲಾಯಿಸಿ ಬಳಸಬೇಕು.

**ಪ್ರೇಮದೇವತೆ:**

ಕುವೆಂಪು ಅಭಿವ್ಯಕ್ತಿಯಲ್ಲಿ ಸೌಂದರ್ಯದ ವಿಷಯದಲ್ಲಿ ಸ್ತ್ರೀ ಪ್ರಧಾನಳಾಗಿದ್ದು, ಪ್ರೀತಿಯ ದ್ಯೋತಕವಾಗಿದ್ದಾಳೆ. ಪ್ರಕೃತಿ –ಪುರುಷನ ಪ್ರೀತಿಯ ಅನುಭಾವಿಕ ಸಂವೇದನೆಯು ಕೇವಲ ಭೌತಿಕವಾದುದಲ್ಲ. ಅದು ಆಧ್ಯಾತ್ಮಿಕ ನೆಲೆಯನ್ನು ಮುಟ್ಟುವುದು. ಪ್ರೇಮಕಾಶ್ಮೀರ, ಜೇನಾಗುವ, ಚಂದ್ರಮಂಚಕೆ ಬಾ ಚಕೋರಿ, ಷೋಡಶಿ ಕವನಸಂಕಲನಗಳಲ್ಲಿನ ಪ್ರೇಮಗೀತೆಗಳಲ್ಲಿ ಸ್ತ್ರೀ ಪ್ರೇಮದೇವತೆಯಾಗಿದ್ದಾಳೆ. ಪರಂಪರೆಯಿಂದ ಬಂದಿರುವ ಪುರುಷ ಪ್ರಧಾನತೆಯ ಅಹಂಕಾರವನ್ನು, ಗಂಡುದರ್ಪವನ್ನು ಮೀರಿ, ಹೆಣ್ಣಿಗೆ ನಿವೇದನೆ ಸಲ್ಲಿಸುವ ಪುರುಷನ ಶರಣಾಗತಿಯಲ್ಲಿ, ಆ ಸುಮಧುರ ಭಾವದಲ್ಲಿ ಸ್ತ್ರೀ ಮುಖ್ಯಳಾಗುತ್ತಾಳೆ. "ಕುವೆಂಪು ಕಟ್ಟಿಕೊಡುವ ನಲ್ಲೆ ನಲ್ಲೆಯರಲ್ಲಿ ನಲ್ಲೆಯ ಔನ್ನತ್ಯವು ಕಾಣದಿರದು. ದೇಹ ಮತ್ತು ಆತ್ಮಿಕ ಸಂಬಂಧಗಳನ್ನು ಬೆಸೆಯುವ ಗಂಡಿನ ಹಂಬಲವೇ ಇಲ್ಲಿ ಮೇಲುಗೈಯಾಗುವುದರಿಂದ ಹೆಣ್ಣಿನ ಸ್ಥಾನವು ಹೆಚ್ಚು ಸುರಕ್ಷಿತವೂ ಹೆಚ್ಚುಗಾರಿಕೆಯದೂ ಆಗಿ ನಿಲ್ಲುತ್ತದೆ."[11] ತಾವು ಪುರುಷರೆಂಬ ಯಾವುದೇ ಹಮ್ಮುಬಿಮ್ಮಿಲ್ಲದೆ ಪ್ರದರ್ಶಿಸುವ ಕವಿಯ ಈ ಭಾವಗಳಲ್ಲಿ ಸ್ತ್ರೀ ಸಮದೃಷ್ಟಿಯ ಸ್ಥಾನ ಪಡೆದಿದ್ದಾಳೆ.

**ನಾ ನಿನಗೆ ನೀನೆನಗೆ ಜೇನಾಗುವಾ!**
**ರಸ ದೇವಗಂಗೆಯಲಿ ಮೀನಾಗುವಾ!**
**ಹೂವಾಗುವಾ ಹಣ್ಣಾಗುವಾ**

**ರತಿರೂಪಿ ಭಗವತಿಗೆ ಮುಡಿಪಾಗುವಾ![12]**

ಒಂದು ಹೆಣ್ಣು, ಪುರುಷನೊಂದಿಗೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು ಪರಂಪರಾಗತ ಅಂಶ. ಆದರೆ ಒಬ್ಬ ಪುರುಷ, ಹೆಂಡತಿಯ ಹೆಸರಿನೊಂದಿಗೆ ತನ್ನ ಗುರುತನ್ನು, ಪರಿಚಯವನ್ನು ಹೇಳುವುದು ಹೊಸ ಬಗೆಯ ಪರಿವರ್ತನೆ, ಹೆಣ್ಣು ಬಾಳಿನ ದಿವ್ಯ ಚೇತನವೆಂದು ಭಾವಿಸುವ ಕವಿ, ಸ್ವರ್ಗ ರೂಪಕದ ಮೂಲಕ ಸ್ತ್ರೀಯರ, ಸಹಧರ್ಮಿಣಿಯ ಮಹತ್ತರ ಸ್ಥಾನಮಾನವನ್ನು ಸಾರಿ ಹೇಳುತ್ತಾರೆ. ಸಂಪ್ರದಾಯವಾದಿಗಳು ಇದನ್ನು ಹೇಗೆ ಸ್ವೀಕರಿಸುವರೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಈ ಕ್ರಾಂತಿಗೆ ಕವಿ ನಾಂದಿ ಹಾಡಿದರು. ಹಮ್ಮುಬಿಮ್ಮುಗಳನ್ನು ತೊರೆದು ನಾನು ಹೇಮಿ ಗಂಡ ಎಂದು ಸ್ವರ್ಗದ ಬಾಗಿಲಲ್ಲಿ ಶರಣಾಗುವಲ್ಲಿ, ಯಾರೇ ಆಗಲಿ ಅವರ ಬದುಕಿನ ಬೆಳಗು ಹೆಣ್ಣು ಎಂಬ ಸಂದೇಶವಿದೆ.

**“ನನ್ನನುದ್ಧರಿಸೆ**
**ಶ್ರೀ ಗುರುಕೃಪೆಯೆ ಮೆಯ್ವೆತ್ತು ಬಂದಿರುವ**
**ಶ್ರೀ ಮಹಾಮಾತೆಯಡಿದಾವರೆಯೆ ಆಗಿರುವ**
**ಸತಿಯ ಒಲವಿನ ಸೆರೆಯ ನಾನು...**
**ನಾ.. ನು, ನಾ... ನು, ನಾ... ನು**
**ಹೇ.. ಮೀ.. ಗಂ.. ಡ!”[13]**

ಕವಿ ತಮ್ಮ ವಿಶಿಷ್ಟ ಚಿಂತನೆಯ ಮೂಲಕ ಸಂಪ್ರದಾಯಗಳಿಗೆ ಸವಾಲೊಡ್ಡುವ, ಹೆಣ್ಣಿನ ಅಸ್ಮಿತೆಯನ್ನು ಎತ್ತಿ ಹಿಡಿಯುವ ದಿಟ್ಟತನ ತೋರಿದ್ದಾರೆ. ಕುವೆಂಪು ಕಾಲಘಟ್ಟಕ್ಕೆ ಈ ನಡೆ ವಿಶೇಷವೇ.

ಪ್ರಗತಿಪರ ಚಿಂತಕರಾದ ಕುವೆಂಪು ವಿಶ್ವಮಾನವ ಪರಿಕಲ್ಪನೆಯ ಸಾಕಾರಕ್ಕಾಗಿ ಸ್ತ್ರೀ ಸಮಾನತೆಯನ್ನು ಒತ್ತಾಯಿಸುತ್ತಾರೆ. ಸಮಾಜದಲ್ಲಿನ ಸ್ತ್ರೀಯರ ಅಸಮಾನ ಸ್ಥಿತಿಗಳನ್ನು ಬಿಂಬಿಸುವ ಅನಿಷ್ಟ ಪದ್ಧತಿಗಳ ಬಗೆಗೆ ಸಮಾಜದ ಗಮನ ಸೆಳೆಯುತ್ತಾರೆ. ಸತಿ ಪದ್ಧತಿ ಮಹಾಭಾರತದ ಕಾಲದಿಂದಲೂ ರೂಢಿಯಲ್ಲಿತ್ತು. ಪಾಂಡುರಾಜ ಮರಣ ಹೊಂದಿದಾಗ ಅವನ ಎರಡನೇ ಪತ್ನಿ ಮಾದ್ರಿ ಗಂಡನ ಸಾವಿಗೆ ತಾನೇ ಕಾರಣ ಎಂಬ ಅಪರಾಧ ಪ್ರಜ್ಞೆಯಿಂದ ಚಿತೆಯೇರುತ್ತಾಳೆ. ಇದು ಇತಿಹಾಸದಲ್ಲಿ ಸತಿ ಆಚರಣೆಯ ಮೊದಲ ಉಲ್ಲೇಖವಾಗಿದೆ. ಶಿವನ ಪತ್ನಿ ಸತಿಯು ತನ್ನ ತಂದೆ ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಆತ್ಮಾರ್ಪಣೆ ಮಾಡಿದುದರ ದ್ಯೋತಕವಾಗಿ ಈ ಪದ್ಧತಿಗೆ ಸತಿ ಎಂಬ ಹೆಸರು ಬಂದಿತಾದರೂ ಈ ಆಚರಣೆಯು ಕ್ರೂರಾತಿಕ್ರೂರ. ಸಮಾಜವು ತಲತಲಾಂತರದಿಂದ ನೀತಿಯಾಗಿಸಿಕೊಂಡಿರುವ ಇಂತಹ ಕ್ರೂರ ಪದ್ಧತಿಗೆ ಬಲಿಯಾಗುವ ಹೆಣ್ಣುಗಳಿಗಾಗಿ ಕವಿ ಮನಸ್ಸು ಮಿಡಿಯುತ್ತದೆ. ಸಾವು–ಬಾಳುಗಳ ಭೇದವನ್ನೇ ಅರಿಯದ ಎಂಟು ವರ್ಷದ ಮುಗ್ಧ ಬಾಲೆ ಸತಿಗೆ ಬಲಿಯಾಗುವುದು ಕರುಣಾಜನಕ ಸಂಗತಿಯಾಗಿದೆ. “ತಾರೆ, ಗಂಡನ ಕೂಡಿ ನೀ ಹೋಗು! ಹದಿಬದೆಗೆ ಸೊಗವಹುದು ಮೇಲಿನ ಲೋಕದಲಿ, ಹೆದರದಿರು ಮಗಳೇ!” ಎಂದು ಅಕ್ಕರೆಯ

ನುಡಿಯಾಡುವ ಮಾವ, ಚಿತೆಯೇರುವ ತಾರೆಯ ಆಭರಣಗಳ ಕಳಚಲು ಬರುವ ಅತ್ತೆ, ವಿಪ್ರವೇಷವ ತೊಟ್ಟ ಯಮಭಟರಂತಹ ಜೋಯಿಸರು ಹೀಗೆ ಅಸ್ವಾಸ್ಥ್ಯ ಸಮಾಜವನ್ನು ಅಣಕಿಸುತ್ತಾರೆ. ಆದರೆ ಸಮಸ್ಯೆಯನ್ನು ತೆರೆದಿಡುವ, ನೋವಿಗೆ ಸ್ಪಂದಿಸುವ ಕವಿ ಸಾಮಾಜಿಕ ಪರಿಹಾರ ಮಾರ್ಗಗಳ ಬಗ್ಗೆ ಹೇಳುವುದಿಲ್ಲ.

**ಮಾವನಲ್ಲಿಹನತ್ತೆಯಲ್ಲಿಹಳಿನಿಯನೆಡೆಯೊಳು ಮಲಗಿ ನಿದ್ರಿಪ**
**ನಲ್ಲಿ ಪೂಜ್ಯರು, ನರರು, ಭೂಸುರರೆಂಬ ಜೋಯಿಸರು;**
**ವೇದಗಳ ಬಲ್ಲವರು; ನೀತಿಯನರಿತವರು; ಧಾರ್ಮಿಕರು; ಧರ್ಮದ**
**ನೆಲೆಯ ಮರ್ಮವ ಕಂಡವರು ಬಳಸಿರಲು ಭಯವೇಕೆ?**[14]

ಹೆಣ್ಣುಮಕ್ಕಳನ್ನು ಹೊರೆ ಎಂದು ಭಾವಿಸುತ್ತಿದ್ದ ಅರಿವುಗೇಡಿ ಜನಗಳು ಋತುಮತಿಯಾಗುವ ಮೊದಲೇ ಮದುವೆ ಮಾಡಿಬಿಡಬೇಕೆಂಬ ಮೌಢ್ಯದಿಂದಾಗಿ ಬಾಲ್ಯವಿವಾಹಗಳು ರೂಢಿಗೆ ಬಂದವು. ಬಾಲ್ಯವಿವಾಹದ ಪರಿಣಾಮದಿಂದ ತಮ್ಮ ಬಾಲ್ಯ ಕಳೆದುಕೊಳ್ಳುವ ಹೆಣ್ಣುಮಕ್ಕಳು ಅಪ್ರಾಪ್ತ ವಯಸ್ಸಿನಲ್ಲಿ ಪತಿಯ ಸಾವಾದರೆ, ಬದುಕಿನ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಅಶುಭ ಎಂಬ ಸಾಂಪ್ರದಾಯಿಕ ಕಳಂಕ ಜೀವನಪರ್ಯಂತ ಬಾಧಿಸುತ್ತದೆ. ಬಾಲವಿಧವೆಯರ ಕರುಣಾಜನಕ ಸ್ಥಿತಿಗೆ ಮರುಗುವ ಕವಿ ಸಮಾಜವನ್ನು ಕಟುವಾಗಿ ಪ್ರಶ್ನಿಸುತ್ತಾರೆ. ಬಾಲವಿಧವೆಯ ಆತ್ಮಾಹುತಿಯ ದುರಂತ ಸಾವಿನ ಪರ್ಯಾವಸನದಲ್ಲಿ ಬಾಲವೈಧವ್ಯದ ಕರಾಳತೆ ದರ್ಶಿತವಾಗಿದೆ.

**ಇಲ್ಲಿ ನ್ಯಾಯಾಸ್ಥಾನ! ಇಲ್ಲಿ ಧರ್ಮವ ಹೇಳು!**
**ಮರದ ಕರಿ ನೆರಳಲ್ಲಿ ಕೊರಲ ಕಣ್ಣಿಯನ್ನಪ್ಪಿ**
**ನೇತಾಡುತ್ತಿರುವಳೈ ಬಾಲವಿಧವೆ!**[15]

ಈ ಕವಿತೆಯಲ್ಲಿ ಬಾಲವಿಧವೆಗೆ ಸಾವಿನ ಬದಲು ಬದುಕಿನ ಪರ್ಯಾಯ ಮಾರ್ಗಗಳ ಸೂಚನೆಯು ಸೂಕ್ತವಾಗಿತ್ತು. ಆದರೆ ಇಲ್ಲಿ ಸಾಮಾಜಿಕ ಪಿಡುಗಿನ ಕರಾಳತೆಯನ್ನು ಬಿಂಬಿಸಿ ಸಮಾಜದ ಕಣ್ತೆರೆಸುವ ಉದ್ದೇಶವಿದೆ. ಕುವೆಂಪು ಅವರಿಗೆ ವಿವಾಹ, ಬದುಕು ಈ ವಿಚಾರಗಳಲ್ಲಿ ಹೆಣ್ಣುಮಕ್ಕಳು ಸ್ವತಂತ್ರರಾಗಬೇಕೆಂಬ ಹಂಬಲ ಮತ್ತು ಒತ್ತಾಸೆಯಿದೆ. ಈ ಉದ್ದೇಶದಿಂದಲೇ ಹುಟ್ಟಿದ್ದು ಹೆಣ್ಣಿಗೆ ವರದಾನವಾದ ಮಂತ್ರಮಾಂಗಲ್ಯ. ಕುವೆಂಪು ಸ್ತ್ರೀವಾದದ ತಾತ್ವಿಕತೆಯು ಈ ವಿವಾಹ ಪದ್ಧತಿಯಲ್ಲಿಯೂ ಗೋಚರವಾಗುತ್ತದೆ.

**ಪುರಾಣ ಸ್ತ್ರೀ ಪ್ರತಿಮೆಗಳ ಆದರ್ಶದ ಚಿತ್ರಣ:**

ಕುವೆಂಪು ಸಂಪ್ರದಾಯಗಳನ್ನು ತಿರಸ್ಕರಿಸಿ, ಪರಂಪರೆಯನ್ನು ಸ್ವೀಕರಿಸಿ, ಪುರಾಣ ವಸ್ತು, ಘಟನೆಗಳನ್ನು ಆಧುನಿಕ, ವೈಚಾರಿಕ ಸಂವೇದನೆಗಳಿಗೆ ಪೂರಕವಾಗಿ ಪುನರ್–ಸೃಷ್ಟಿ ಮಾಡಿದ ದಾರ್ಶನಿಕರು. ರಾಮಾಯಣದ ಸ್ತ್ರೀ ಪಾತ್ರಗಳನ್ನು ಹೊಸ ದೃಷ್ಟಿಯಿಂದ ಕಂಡವರು. ಇಪ್ಪತ್ತನೇ ಶತಮಾನದ ಆಧುನೀಕರಣದ ಮಹಾಪೂರದಲ್ಲಿ

ಬೆಳೆದ ಕವಿಗೆ ಪುರಾಣ ಸ್ತ್ರೀ ಪಾತ್ರಗಳು ಆದರ್ಶವಾಗುತ್ತವೆ. ರಾಮಾಯಣದ ಊರ್ಮಿಳೆ ಅವರನ್ನು ಹೆಚ್ಚು ಕಾಡಿದ ಪಾತ್ರ. ರಾಮ ಸೀತೆಯರ ಜೊತೆ ಅಣ್ಣನ ಸೇವೆಗೆಂದು ಹದಿನಾಲ್ಕು ವರ್ಷ ವನವಾಸಕ್ಕೆ ತೆರಳಿದ ಲಕ್ಷ್ಮಣನನ್ನು, ಅವನ ಭ್ರಾತೃ ಪ್ರೇಮವನ್ನು ಇಡೀ ಜಗತ್ತು ಕೊಂಡಾಡಿತು. ಆದರೆ ಪತಿಯಿಂದ ದೂರವಾಗಿ, ಅಯೋಧ್ಯೆಯಲ್ಲಿಯೇ ಉಳಿದು, ಅವನ ಕ್ಷೇಮಕ್ಕಾಗಿಯೇ ತಪಗೈದ ಊರ್ಮಿಳೆಯ ತ್ಯಾಗ ಯಾರಿಗೂ ಕಾಣದಾಯಿತು. ಅಜ್ಞಾತವಾಯಿತು.

ರಾಮಾಯಣದಲ್ಲಿ ಊರ್ಮಿಳೆ ನಿರ್ಲಕ್ಷಿತ, ಅನಾದರಕ್ಕೊಳಗಾಗಿರುವ ಪಾತ್ರವೆಂದು ರವೀಂದ್ರನಾಥ ಟ್ಯಾಗೋರರು ಗುರುತಿಸಿದ್ದಾರೆ.“ವಾಲ್ಮೀಕಿ ಮಹಾಕವಿಯು ತನ್ನ ಕಲ್ಪನಾ ಶಕ್ತಿಯ ಕರುಣಾಜಲವೆಲ್ಲವನ್ನು ಜನಕಸುತೆಯ (ಸೀತಾದೇವಿಯ) ಪುಣ್ಯಭಿಷೇಕದಲ್ಲಿಯೇ ಮುಗಿಸಿಬಿಟ್ಟಿರುತ್ತಾನೆ. ಕಳೆಗುಂದಿದ ಮುಖವುಳ್ಳವಳೂ, ಸಮಸ್ತ ಐಹಿಕ ಸುಖದಿಂದ ವಂಚಿತಳೂ ಆಗಿ ಸೀತಾದೇವಿಯ ಛಾಯೆಯಲ್ಲಿ ಅವಕುಂಠನವತಿಯಾಗಿ ನಿಂತಿರುವ ಮತ್ತೊಬ್ಬ ರಾಜಕುಮಾರಿಯ (ಆಕೆಯು ಜನಕ ಸುತೆಯೇ) ಚಿರದುಃಖದಿಂದ ತಪ್ತವಾದ ನಮ್ರಲಲಾಟದ ಮೇಲೆ ಕವಿಯು ತನ್ನ ಕಮಂಡಲುವಿನ ಒಂದು ತೊಟ್ಟು ನೀರನ್ನಾದರೂ ಏಕೆ ಚಿಮುಕಿಸುವುದಿಲ್ಲ?”[16]

ಟ್ಯಾಗೋರರ ಪ್ರಶ್ನೆಗಳಿಗೆ ಕುವೆಂಪು ತಮ್ಮ ಮಹಾಕಾವ್ಯ ಶ್ರೀ ರಾಮಾಯಣದರ್ಶನಂ ಕೃತಿಯಲ್ಲಿ, ಮತ್ತು ಕವಿತೆಗಳಲ್ಲಿ, ರಾಮಾಯಣದಲ್ಲಿ ಅದೃಶ್ಯವಾಗಿದ್ದ, ಅಜ್ಞಾತವಾಗಿದ್ದ ಊರ್ಮಿಳೆಯ ಪಾತ್ರಕ್ಕೆ ನ್ಯಾಯ ಒದಗಿಸುವ ಮೂಲಕ ಉತ್ತರಿಸಿದರು. ವಾಲ್ಮೀಕಿ ರಾಮಾಯಣದಲ್ಲಿ ಕೇವಲ ಹೆಸರಾಗಿದ್ದ ಊರ್ಮಿಳೆಯ ಪಾತ್ರವನ್ನು ಮುನ್ನೆಲೆಗೆ ತಂದರು.

**ರಾಮಾಯಣದ ಮಹಾ ರತ್ನವೇದಿಯ ಮೇಲೆ,**
**ಮೂಲೆಯಲಿ, ನಿಂತಿರುವುದೊಂದಮೃತ ಶಿಲ್ಪಕೃತಿ,**
**ನಾಣ್ಚಿ, ಕಾಣದೆ ಸಂತೆಗಣ್ಗಳಿಗೆ: ಪೂರ್ಣಸತಿ,**
**ತ್ರೈಭುವನ ವಂದಿತ ಬ್ರಹ್ಮಮೂರ್ತಿಗಳ ಛಾಯೆ**
**ಮುಚ್ಚಿ ಮರೆಸಿದೆ ನಿನ್ನನೆಲೆ ಸಾಧ್ವಿ:**
**ಹನುಮಂತ ರಾಮ ಲಕ್ಷ್ಮಣ ಸೀತೆ**
**ಕೈಕೊಳಲಿ ಜನಪೂಜೆಯಂ; ನಿನಗೆ ಸಂಪ್ರೀತಿ ನನ್ನೆದಿದೆಕೋ!**[17]

ಆ ಊರ್ಮಿಳೆಯು ಕುವೆಂಪುವಿನ ಕಾವ್ಯಶಕ್ತಿಯಾಗಿದ್ದಾಳೆ. ಜನಮಾನಸಕ್ಕೆ ಅವಳ ಘನವ್ಯಕ್ತಿತ್ವದ ದರ್ಶನವನ್ನು ಪರಿಣಾಮಕಾರಿಯಾಗಿ ಮಾಡಿಸುತ್ತಾರೆ. ಮಾತಿಗಿಂತ ಮೌನದಲ್ಲಿ, ಸ್ವಾರ್ಥಕ್ಕಿಂತ ತ್ಯಾಗದಲ್ಲಿ, ಇರುವಿಕೆಯ ತೋರಿಕೆಗಿಂತ ಇಲ್ಲವಾಗಿಸಿಕೊಳ್ಳುವ ಅನನ್ಯ ಗುಣಗಳ ಊರ್ಮಿಳೆ ವಿಶಿಷ್ಟವಾಗಿ ತೋರುತ್ತಾಳೆ. ಅವಳ ತಪಃಶಕ್ತಿಯೇ ಲಕ್ಷ್ಮಣನಿಗೆ ಶ್ರೀರಕ್ಷೆಯಾಯಿತು.

ಲೋಕಮಾತೆ ಎಂದೇ ಪೂಜಿತಳಾದ ಸೀತೆ ಭಾರತೀಯ ನಾರಿಯರ

ಆದರ್ಶವಾಗಿದ್ದಾಳೆ. ಸೀತೆ ಅನುನಯದ ದುರ್ಬಲ ಪಾತ್ರವೆಂಬ ಇದುವರೆಗಿನ ಗ್ರಹಿಕೆಯನ್ನು ಕುವೆಂಪು ಸುಳ್ಳಾಗಿಸಿದರು. ವೈಯಕ್ತಿಕ ಸುಖಕ್ಕಿಂತ, ಕೌಟುಂಬಿಕ ಮೌಲ್ಯಗಳಿಗೆ ಬೆಲೆಕೊಡುವ, ಯಾವುದೇ ಪರಿಸ್ಥಿತಿಯಲ್ಲಿ ಆತ್ಮಗೌರವ ಬಿಡದ ಸೀತೆ ದಿಟ್ಟತನಕ್ಕೆ ಮಾದರಿಯಾಗುತ್ತಾಳೆ. ರಾವಣನ ಮನಪರಿವರ್ತನೆ ಮಾಡಿ, ಅವನನ್ನು ಮಣಿಸಿದ ಸೀತೆಯ ಪಾತಿವ್ರತ್ಯದ ತೇಜಸ್ಸು, ಅಪೂರ್ವವಾದ ಆತ್ಮಶಕ್ತಿಯ ಬಗ್ಗೆ ಆದರಣೀಯ ಭಾವ ಮೂಡುವುದು. ಸೀತೆಯು ತನಗೆದುರಾದ ಸಂಕಷ್ಟಗಳನ್ನು ದಿಟ್ಟತನದಿಂದ, ಸಂಯಮದಿಂದ ಎದುರಿಸಿ ಪುಟವಿಟ್ಟ ಚಿನ್ನವಾಗುತ್ತಾಳೆ. ಸೀತೆ ಭಾರತೀಯ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿದ್ದಾಳೆ.

**ಈಲಿಯಡ್ಡಿನ ಮಹಾಕಲೆಯ ನೆತ್ತರ್ ಗಣ್ಗೆ**
**ಬೆಲೆವೆಣ್ಣೆ ಗುರಿಯಾಯ್ತೆ? – ಕ್ಷಮಿಸು: ಸೀತೆಯ ಶುಚಿಗೆ**
**ರಾಮಾಯಣನೊರೆದನಾದಿಕವಿ ವಾಲ್ಮೀಕಿ.**
**ಆ ಶುಚಿಯ ಗಂಗೆಯೊಳ್ ಮಿಂದೆನಗೆ ಸಹಿಸದಯ್**
**ಕೆಸರಿನೋಕುಳಿಯ ನಿನ್ನದ್ಭುತ ರಣಕ್ರೀಡೆ!**[18]

ಗ್ರೀಕ್‌ನ ಹೋಮರ್ ಕವಿ ಬರೆದ ಈಲಿಯಡ್, ವಾಲ್ಮೀಕಿಯ ರಾಮಾಯಣ ಜಗತ್ತಿನ ಎರಡು ಮಹಾಕಾವ್ಯಗಳಾಗಿವೆ. ಈಲಿಯಡ್‌ನ ಹೆಲೆನ್, ರಾಮಾಯಣದ ಸೀತೆ ಇವರ ಕಾರಣದಿಂದ ಇತಿಹಾಸದಲ್ಲಿ ಮಹಾಯುದ್ಧಗಳೇ ಘಟಿಸಿ ಹೋದವು. ಲಂಕಾದಹನವಾಯಿತು, ಟ್ರಾಯ್ ನಗರ ನಾಶವಾಯಿತು. ಎರಡು ಪಾತ್ರಗಳಲ್ಲಿನ ಸಾಮ್ಯತೆಗಳು ಹಲವು. ಅವರ ಅಪ್ರತಿಮ ಸೌಂದರ್ಯದ ಕಾರಣ ರಾವಣನಿಂದ ಸೀತೆಯ, ಟ್ರಾಯ್‌ನ ರಾಜಕುಮಾರ ಪ್ಯಾರಿಸ್‌ನಿಂದ ಹೆಲನಳ ಅಪಹರಣವಾಯಿತು. ಪತಿಯಿಂದ ದೂರವಾಗಿ ಅವರು ಕಠಿಣ ದಿನಗಳನ್ನು ಎದುರಿಸಬೇಕಾಯಿತು.

ಹೋಮರ್ ಕವಿಯ ಕಲೆಗೆ ತಲೆಬಾಗುವ ಕುವೆಂಪು, ಕಾವ್ಯದ ಕಥೆ ಮತ್ತು ಪಾತ್ರದ ಬಗೆಗೆ ಚಕಾರ ಎತ್ತುತ್ತಾರೆ. ರಾಮಾಯಣದ ಕಥೆಯನ್ನೇ ಹೋಲುವ ಕಥೆಯಾದರೂ ಲೋಕ ಸುಂದರಿ ಹೆಲೆನ್ ತನ್ನ ನಾಡು, ಮನೆ, ಅಣ್ಣತಮ್ಮಂದಿರು, ಪತಿ, ಹೆಣ್ಣು ಕೂಸನ್ನು ತ್ಯಜಿಸಿ ತನುರುಚಿಗೆ ಸೋತು ಪ್ಯಾರಿಸ್ ರಾಜನೊಂದಿಗೆ ಓಡಿ ಹೋಗುವ ಬಗ್ಗೆ ಹೇಸುತ್ತಾರೆ. ಸೀತೆಯ ಶುಚಿತ್ವ, ಪಾತಿವ್ರತ್ಯದ ಬಗೆಗೆ ಹೆಮ್ಮೆಯ ಭಾವದಿಂದ ಬೀಗುವ ಕವಿಗೆ ಹೆಲೆನಳ ಕಾರಣ ಈಲಿಯಡ್ ಮಹಾಕಾವ್ಯ ಕೆಸರಿನೋಕುಳಿಯ ಅದ್ಭುತ ರಣ ಕ್ರೀಡೆಯಾಗಿ ಕಾಣುತ್ತದೆ. ಆದರೆ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಸೇರೆಗಾರನೊಂದಿಗೆ ಅನೈತಿಕ ಸಂಬಂಧ ಬೆಳೆಸಿದ್ದ ಸುಬ್ಬಮ್ಮನಂತಹ ಹೆಣ್ಣು ಕಾದಂಬರಿಯ ಶೀರ್ಷಿಕೆಯನ್ನು ಅಲಂಕರಿಸಿರುವುದು ಪ್ರಶ್ನಾರ್ಥಕವೆನಿಸುತ್ತದೆ.

ಒಟ್ಟಾರೆ, ಕುವೆಂಪು ಚಿಂತನೆಯಲ್ಲಿ 'ಕುಟುಂಬ'ದಲ್ಲಿ ಹೆಣ್ಣಿನ ಸ್ಥಾನ ಶಿಖರಪ್ರಾಯವಾದುದು. ಅವರ ಕಾಳಜಿ ಮಹಿಳೆಯರನ್ನು ಆದರ್ಶ ಗೃಹಿಣಿಯರಾಗಿ ಸಿದ್ಧಗೊಳಿಸುವುದರಲ್ಲಿ ಇದೆ. ಹೆಣ್ಣನ್ನು ಪ್ರೇಮದೇವತೆಯಾಗಿ ಪರಿಭಾವಿಸುವ ಮೂಲಕ ಗಂಡಿನ ಬಾಳಿನಲ್ಲಿ ಅವಳ ಸ್ಥಾನವನ್ನು ಮುಖ್ಯವಾಗಿಸುತ್ತಾರೆ. ಸ್ತ್ರೀಯರ

ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಅವಗಣನೆಗೆ, ಉಪೇಕ್ಷೆಗೆ ಒಳಗಾದ ಪುರಾಣ ಸ್ತ್ರೀ ಪಾತ್ರಗಳನ್ನು ಮುನ್ನೆಲೆಗೆ ತರುವಲ್ಲಿ, ಪಾತ್ರಗಳಿಗೆ ಪ್ರಾಧಾನ್ಯತೆ ತುಂಬುವಲ್ಲಿ ಅವರ ಸ್ತ್ರೀ ಸಂವೇದನೆ ಬಿಂಬಿತವಾಗಿದೆ. ವಾಸ್ತವ ಮತ್ತು ಮಾನವೀಯ ನೆಲೆಯಲ್ಲಿ ಸನ್ನಿವೇಶಗಳನ್ನು ಮರುಸೃಷ್ಟಿಸಿ ಸ್ತ್ರೀ ಪಾತ್ರಗಳ ಭಾವನೆಗಳಿಗೆ ಮಿಡಿಯುವಲ್ಲಿ ಅವರ ಚಿಂತನೆ ಉನ್ನತವಾಗುವುದು.

ಆದರೆ ನಾಗಿ ಮತ್ತು ಕುಮುದಿನಿ ಕವಿತೆಗಳಲ್ಲಿ ಪಾರಂಪರಿಕ ಮೌಲ್ಯವನ್ನಾಧರಿಸಿದ ಭಿನ್ನ ನಿಲುವು ವ್ಯಕ್ತವಾಗಿದೆ. ಮಲತಾಯಿ ಮಾದಿಯ ಕ್ರೌರ್ಯದ ಗುಣ, ಕುಮುದಿನಿಯ ಅಧೀನ ನೆಲೆಯ ಚಿತ್ರಣದಲ್ಲಿ ಸ್ತ್ರೀಯರ ದೌರ್ಬಲ್ಯಗಳೇ ಮುಖ್ಯವಾಗಿವೆ. ಅಲ್ಲದೆ ಹೆಣ್ಣನ್ನು ಭಾವನಾತ್ಮಕ ನೆಲೆಯಲ್ಲಿಯೇ ಪರಿಭಾವಿಸುವ ಕವಿಗೆ ವಾಸ್ತವಿಕ ಸಂಗತಿಗಳು ತುಸು ದೂರವಾಗಿವೆ. ಸಮಕಾಲೀನ, ಆಧುನಿಕ ಮಹಿಳೆ ಅವರ ಚಿಂತನೆಗಳಲ್ಲಿ ಕಾಣೆಯಾಗಿದ್ದಾಳೆ. ಕವಿಯು ಮಹಿಳೆಯರನ್ನು ಆಧುನಿಕರಾಗಿ, ಪ್ರಗತಿಪರರಾಗಿ ಚಿತ್ರಿಸುವುದರಲ್ಲಿ ಆಸಕ್ತರಾಗಿಲ್ಲ. ಕುಟುಂಬದ ಆಚೆ ಮಹಿಳೆಯ ಭಾಗವಹಿಸುವಿಕೆಯ ಬಗ್ಗೆ ಕುವೆಂಪು ಚಿಂತನೆಗಳು ಮಾತನಾಡುವುದಿಲ್ಲ. ಸ್ತ್ರೀವಾದವು ಮಹಿಳೆಯು ಹೊರಗಿನ ಪ್ರಪಂಚಕ್ಕೆ ತೆರೆದುಕೊಳ್ಳಬೇಕೆಂದು ವಾದಿಸಿದರೆ, ಸ್ತ್ರೀಯರು ಮನೆಯ ತಪಸ್ವಿನಿಯಾಗಿ ಇರಬೇಕೆಂಬುದೇ ಅವರ ಆಶಯ.

ಊರ್ಮಿಳೆಯ ತ್ಯಾಗ, ಮೌನ ಹಾಗೂ ಸೀತೆಯ ಶುಚಿತ್ವ, ಪಾತಿವ್ರತ್ಯಗಳನ್ನು ಕೊಂಡಾಡುವ ಕವಿಗೆ ಆ ಮೌಲ್ಯಗಳ ಪುನರ್ ಸ್ಥಾಪನೆಯ ಹಂಬಲವೂ ಇದ್ದಿರಬಹುದು. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಎಚ್ಚರದ ಭಾವಗಳು ಜಾಗೃತಗೊಂಡರೂ, ಬಹುವಾಗಿ ಸೀತೆ, ಊರ್ಮಿಳೆ, ತಪಸ್ವಿನಿ, ಪಾರಂಪರಿಕ ಸ್ತ್ರೀ, ಗೃಹಿಣಿಯ ಸುತ್ತಲೇ ಸುತ್ತುವ ಅವರ ಸ್ತ್ರೀ ಚಿಂತನೆಯು ಸಂಸ್ಕೃತಿ, ಪರಂಪರೆಯ ಸುಳಿಯಲ್ಲಿ ಸುಳಿದಾಡುವುದರಲ್ಲಿಯೇ ತೃಪ್ತವಾಗಿದೆ.

## ಕೊನೆ ಟಿಪ್ಪಣಿಗಳು:


1. ರಾಮೇಗೌಡ, (2015), ಕುವೆಂಪು ಅಧ್ಯಯನ ಆಯಾಮ, ಮಂಡ್ಯ: ಕರ್ನಾಟಕ ಸಂಘ, ಪು.ಸಂ. 220.
2. ಹೆಚ್.ಎಸ್. ಶ್ರೀಮತಿ, (2020), ಜನಸಾಮಾನ್ಯರಿಗೆ ಸ್ತ್ರೀವಾದ – ಭಾಗ 11, ಆನ್‌ಲೈನ್: ಋತುಮಾನ (ಯೂಟ್ಯೂಬ್ ಚಾನೆಲ್).
3. ಕುವೆಂಪು, (2017), ನೆನಪಿನ ದೋಣಿಯಲ್ಲಿ (ಕುವೆಂಪು ಸಮಗ್ರ ಗದ್ಯ ಸಂಪುಟ – 5), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 797.
4. ಕುವೆಂಪು, (2017), ಮನೆ ಮನೆಯ ತಪಸ್ವಿನಿಗೆ – ಇಕ್ಷುಗಂಗೋತ್ರಿ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 80.
5. ಸಿ.ಪಿ.ಕೆ., (2012), ಕುವೆಂಪು ಸಾಹಿತ್ಯ ಸಂವಾದ, ಮೈಸೂರು: ಪ್ರಸಾರಾಂಗ, ಮಾನಸಗಂಗೋತ್ರಿ, ಪು.ಸಂ. 150.
6. ಕುವೆಂಪು, (2017), ನಾಗಿ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 608.
7. ಕುವೆಂಪು, (2017), ಕುಮುದಿನಿ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 668.
8. ಪಾಟಣಕರ ಚಂದ್ರಶೇಖರಭಟ್ಟ (ಅನು.), (1954), ಮಾರ್ಕಂಡೇಯ ಪುರಾಣಂ, ಮೈಸೂರು: ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಪು.ಸಂ. 328.
9. ಪಾಟಣಕರ ಚಂದ್ರಶೇಖರಭಟ್ಟ (ಅನು.), (1954), ಮಾರ್ಕಂಡೇಯ ಪುರಾಣಂ, ಮೈಸೂರು: ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಪು.ಸಂ. 330.
10. ಕುವೆಂಪು, (2017), ಭೈರವನಾರಿ – ಪಾಂಚಜನ್ಯ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 1), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 125.
11. ತಾರಿಣಿ ಶುಭದಾಯಿನಿ, (2024), ಪ್ರೇಮೋಪನಿಷತ್ತು (ಸಾಹಿತ್ಯ), ಆನ್‌ಲೈನ್: ಚಿಲುಮೆ – ಕನ್ನಡ ನಲ್ಬರಹ ತಾಣ (ಡಿಜಿಟಲ್).
12. ಕುವೆಂಪು, (2017), ಜೇನಾಗುವಾ! (ಕುವೆಂಪು ಸಮಗ್ರ ಕಾವ್ಯ, ಸಂಪುಟ –1), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 917.
13. ಕುವೆಂಪು, (2017), ಸ್ವರ್ಗದ್ವಾರದಿ ಯಕ್ಷಪ್ರಶ್ನೆ – ಅನುತ್ತರಾ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 228.
14. ಕುವೆಂಪು, (2017), ಸತಿ – ಹೊನ್ನ ಹೊತ್ತಾರೆ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 539.
15. ಕುವೆಂಪು, (2017), ಬಾಲ ವಿಧವೆ – ಹೊನ್ನ ಹೊತ್ತಾರೆ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 2), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 551.
16. ಟಿ.ಎಸ್. ವೆಂಕಣ್ಣಯ್ಯ, (1948), ಪ್ರಾಚೀನ ಸಾಹಿತ್ಯ – ಕಾವ್ಯದ ಅನಾದರ, ಮೈಸೂರು: ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಪು.ಸಂ. 79.
17. ಕುವೆಂಪು, (2017), ಊರ್ಮಿಳಾದೇವಿ – ಕೃತ್ತಿಕೆ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 1), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 484.
18. ಕುವೆಂಪು, (2017), ಹೋಮರ್ – ಕೃತ್ತಿಕೆ (ಕುವೆಂಪು ಸಮಗ್ರ ಕಾವ್ಯ, ಸಂಪುಟ – 1), ಕುಪ್ಪಳಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.ಸಂ. 485.